ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ, ಐವಾನ್-ಎ-ಶಾಹಿ ಬಡಾವಣೆ, ಕಲಬುರಗಿ

ಸಂಖ್ಯೆ: ಸಿ2(1)/ಡಳಿತ/ನಿರ್ದಿಷ್ಟಪಡಿಸಿದ/ಹುದ್ದೆ/33/2023-24 ದಿನಾಂಕ: 24/06/2024

ಜ್ಞಾಪನ

ವಿಷಯ: 2023-24ನೇ ಸಾಲಿಗೆ ಗ್ರೂಪ್-'ಬಿ ಸರ್ಕಾರಿ ಪ್ರೌಢ ಶಾಲೆ ಮುಖ್ಯ ಶಿಕ್ಷಕರ/ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ: 1) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ: ಸಿ3(4) ನಿ.ಹು.ಅ.ಪ:ದಿನಾಂಕ: 11/06/2024

2) ವರ್ಗಾವಣೆ ತಂತ್ರಾಂಶದ ಮೂಲಕ ದಿ: 24/06/2024 ರಂದು ನೀಡಲಾದ ತಾತ್ಕಾಲಿಕ ಕೌನ್ಸಿಲಿಂಗ ಆದ್ಯತಾ ಪಟ್ಟಿ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿಗೆ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ/ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಗೆ ಉಲ್ಲೇಖ (1) ರನ್ವಯ ಪರಿಷ್ಕøತ ವೇಳಾ ಪಟ್ಟಿಯನ್ನು ನೀಡಲಾಗಿದೆ.

ಪರಿಷ್ಕøತ ವೇಳಾ ಪಟ್ಟಿಯಂತೆ ಇಂದು ದಿನಾಂಕ: 24/06/2024 ರಂದು ಸಾಯಂಕಾಲ 7.45 ಗಂಟೆಗೆ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ ಪರೀಕ್ಷೆ ಮೂಲಕ ಅರ್ಹತೆ ಗಳಿಸಿದ ಮುಖ್ಯ ಶಿಕ್ಷಕರ ತಾತ್ಕಾಲಿಕ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿಯನ್ನು ವರ್ಗಾವಣೆ ತಂತ್ರಾಂಶದಲ್ಲಿ ನೀಡಲಾಗಿದೆ.

ನಿರ್ದಿಷ್ಟಪಡಿಸಿದ ಹುದ್ದೆ ಮತ್ತು ಸ್ಥಳ ಆಯ್ಕೆ ಮಾಡಿಕೊಳ್ಳಲು ಸ್ಥಳ ನಿಯುಕ್ತಿ ಕೌನ್ಸಿಲಿಂಗಗಾಗಿ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿ ಹಾಗೂ ನಿರ್ದಿಷ್ಟಪಡಿಸಿದ ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾ ವೆಬ್-ಸೈಟ್ http://cpikalaburgi.karnataka.gov.in ನಲ್ಲಿ ಪ್ರಕಟಿಸಲಾಗಿದೆ.

ಪ್ರಕಟಿತ ಆದ್ಯತಾ ಪಟ್ಟಿಯಲ್ಲಿರುವ ಗ್ರೂಪ್-'ಬಿ' ಮುಖ್ಯ ಶಿಕ್ಷಕರು/ತತ್ಸಮಾನ ಅಧಿಕಾರಿಗಳು ನಿರ್ದಿಷ್ಟಪಡಿಸಿದ ಹುದ್ದೆ ಮತ್ತು ಸ್ಥಳ ಆಯ್ಕೆ ಮಾಡಿಕೊಳ್ಳಲು ಆಯಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರ ಕಛೇರಿಯಲ್ಲಿ ಆನ್-ಲೈನ್ ಮೂಲಕ ದಿನಾಂಕ: 26/06/2024 ರಂದು ಮುಂಜಾನೆ 11-00 ಗಂಟೆಗೆ ನಡೆಸಲಾಗುವ ಸ್ಥಳ ಆಯ್ಕೆ ಕೌನ್ಸಿಲಿಂಗನಲ್ಲಿ ತಪ್ಪದೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

ವಿಷಯ ಪರಿವೀಕ್ಷಕರ ಹುದ್ದೆಗಳಿಗೆ ಕೌನ್ಸಿಲಿಂಗ ನೀಡುವ ಸಂದರ್ಭದಲ್ಲಿ ಶಿಕ್ಷಕರು ಆಯ್ಕೆ ಮಾಡಿಕೊಳ್ಳುವ ಹುದ್ದೆಯ ವಿಷಯ ಮತ್ತು ಅವರು ಅಭ್ಯಾಸ ಮಾಡಿದ ವಿಷಯ ಒಂದೇ ಆಗಿರುವುದನ್ನು ಖಚಿತಪಡಿಸಿಕೊಂಡು ಸ್ಥಳ ಆಯ್ಕೆಗೆ ಉಪನಿರ್ದೇಶಕರು ಅನುಮತಿಸಲು ತಿಳಿಸಿದೆ.

25.06.2024

(ಡಾ. ಆಕಾಶ್ ಎಸ್ ಭಾ.ಆ.ಸೇ)
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿ:

1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2. ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು/ಪ್ರೊಗ್ರಾಮರ್ ಇ-ಗವ್ರ್ನನ್ಸ್ ಶಾಖೆ, ಆಯುಕ್ತರ ಕಛೇರಿ ಕಲಬುರಗಿ ರವರಿಗೆ ವೆಬ್-ಸೈಟ್ ನಲ್ಲಿ ಪ್ರಕಟಿಸಲು.
4. ಕಛೇರಿ ಕಡತಕ್ಕೆ.